ಕರ್ನಾಟಕ ಸರಕಾರ
ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ
ನಂ.17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ ಬೆಂಗಳೂರು 560 001. ದೂ. 080-22028032/34/ಫ್ಯಾಕ್ಸ್ 22028041

ದಿನಾಂಕ: 28-1-2015

# ಪತ್ರಿಕಾ ಪ್ರಕಟಣೆ

## ಸಚಿವ ಸಂಪುಟ ಸಭೆ

**ಬೆಂಗಳೂರು, ಜ. 28 (ಕರ್ನಾಟಕ ವಾರ್ತೆ) :**

ರಾಜ್ಯ ಸಚಿವ ಸಂಪುಟ ಸಭೆಯು ಜನವರಿ 29 ರಂದು ಸಂಜೆ 4-00 ಗಂಟೆಗೆ ವಿಧಾನ ಸೌಧದ ಮೂರನೇ ಮಹಡಿಯಲ್ಲಿರುವ ಸಚಿವ ಸಂಪುಟ ಸಭಾಮಂದಿರದಲ್ಲಿ ನಡೆಯಲಿದೆ.
ಬಾಬು/ಕೆಎಂ

## ವ್ಯವಸ್ಥಾಪಕರ ನೇಮಕಾತಿಗೆ ಅರ್ಜಿ ಆಹ್ವಾನ

**ಬೆಂಗಳೂರು, ಜ. 28 (ಕರ್ನಾಟಕ ವಾರ್ತೆ) :**

ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿಯಿಂದ ಅಕಾಡೆಮಿಯ ಸಾಹಸ ಕ್ರೀಡಾ ಕೇಂದ್ರಗಳಿಗೆ ತಾತ್ಕಾಲಿಕವಾಗಿ 179 ದಿನಗಳಿಗೆ ವ್ಯವಸ್ಥಾಪಕರುಗಳನ್ನು ನೇಮಿಸಲು ಉದ್ದೇಶಿಸಲಾಗಿದ್ದು, ಅನುಬಂಧ 1 ರಲ್ಲಿನ ಅರ್ಹತೆಯುಳ್ಳ ಅಭ್ಯರ್ಥಿಗಳು ನಿಗದಿತ ಅರ್ಜಿ ನಮೂನೆಯನ್ನು ಭರ್ತಿ ಮಾಡಿ ಸಂಬಂಧಿಸಿದ ಅರ್ಹತೆಯುಳ್ಳ ಪ್ರಮಾಣ ಪತ್ರದೊಂದಿಗೆ ಈ ಕಚೇರಿಗೆ ದಿನಾಂಕ 4-2-2015 ರಂದು ಸಾಯಂಕಾಲ 5.00 ಗಂಟೆಯೊಳಗಾಗಿ ( ಇ-ಮೇಲ್ gethnaa1989@gmail.co) ಮೂಲಕ ಸಲ್ಲಿಸುವುದು ಹಾಗೂ ದಿನಾಂಕ 05-02-2015 ರಂದು ಬೆಳಿಗ್ಗೆ 11.00 ಗಂಟೆಗೆ ಅಗತ್ಯ ದಾಖಲಾತಿಗಳೊಂದಿಗೆ ಸಂದರ್ಶನಕ್ಕೆ ಹಾಜರಾತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ :22210454
ಬಾಬು/ಕೆಎಂ

## ಪಡಸಾಲೆ ಯೋಜನೆ

**ಜನವರಿ 28 (ಕರ್ನಾಟಕ ವಾರ್ತೆ)**

ಕಂದಾಯ ಇಲಾಖೆಯಿಂದ ಸಾರ್ವಜನಿಕರಿಗೆ ನೀಡಲಾಗುವ ಎಲ್ಲಾ ಸೇವೆಗಳನ್ನು ತಾಲ್ಲೂಕು ಕಚೇರಿಯಲ್ಲಿ ಒಂದೇ ಸೂರಿನಡಿಯಲ್ಲಿ ಪಡೆಯಲು ಅನುಕೂಲ ಮಾಡುವ ಉದ್ದೇಶದಿಂದ ರಾಜ್ಯದ ಎಲ್ಲಾ ತಾಲ್ಲೂಕು ಕಚೇರಿಗಳಲ್ಲಿ ಪಡಸಾಲೆ ಎಂಬ ಯೋಜನೆಯನ್ನು ಜಾರಿಗೆ ತರಲು 2014–15 ರ ಆಯವ್ಯಯ ಭಾಷಣದಲ್ಲಿ ಘೋಷಿಸಲಾಗಿದೆ.

ಸಾರ್ವಜನಿಕರು ವಿವಿಧ ಉದ್ದೇಶಗಳಿಗಾಗಿ ತಾಲ್ಲೂಕು ಕಚೇರಿಗಳಿಂದ ಪಡೆಯಬೇಕಾಗಿರುವ ದಾಖಲೆಗಳಿಗಾಗಿ ತಾಲ್ಲೂಕು ಕಚೇರಿಯಲ್ಲಿರುವ ಪ್ರತಿಯೊಂದು ಶಾಖೆಗಳಿಗೂ ಅಲೆದಾಡಬೇಕಾಗಿರುತ್ತದೆ. ಉದಾ: ಪಡಿತರ ಚೀಟಿಗೆ ಅರ್ಜಿ ಸಲ್ಲಿಸಲು ಆಹಾರ ಶಾಖೆಗೆ, ಧೃಢೀಕೃತ ನಕಲನ್ನು ದಾಖಲೆ ಕೊಠಡಿಗೆ, ಪಹಣಿ ಪತ್ರ, ಹಕ್ಕು ಬದಲಾವಣೆ ಕೋರಿ ಅರ್ಜಿ ಸಲ್ಲಿಸಲು ಭೂಮಿ ಶಾಖೆಗೆ, ಸರ್ವೆಗೆ ಸಂಬಂಧಿಸಿದ ದಾಖಲೆಗಳನ್ನು ಪಡೆಯಲು ಸರ್ವೆ ಶಾಖೆಗೆ ಹಾಗೂ ಕಂದಾಯ ಇಲಾಖೆಯಿಂದ ನೀಡುವ ವಿವಿಧ ಸೇವೆಗಳ ಪ್ರಮಾಣ ಪತ್ರಗಳನ್ನು ಪಡೆಯಲು ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಗೆ ಭೇಟಿ ನೀಡಬೇಕಾಗಿರುತ್ತದೆ. ಈ ರೀತಿ ಸಾರ್ವಜನಿಕರು ತಮಗೆ ಅಗತ್ಯವಿರುವ ದಾಖಲಾತಿಗಳನ್ನು ಪಡೆಯಲು ಒಂದು ಶಾಖೆಯಿಂದ ಮತ್ತೊಂದು ಶಾಖೆಗೆ ಅಲೆದಾಡುವ ಪ್ರಸಂಗವನ್ನು ಪಡಸಾಲೆ ಯೋಜನೆಯಿಂದ ತಪ್ಪಿಸಬಹುದಾಗಿದೆ.

ಈ ಪಡಸಾಲೆ ಯೋಜನೆಯನ್ನು ರಾಜ್ಯದ 203 ತಾಲ್ಲೂಕು ಕಚೇರಿಗಳಲ್ಲಿ ಒಟ್ಟು ರೂ. 16.00 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ಬಾಬು/ಕೆಎಂ

## ಕೃಷಿ ವಿಶ್ವವಿದ್ಯಾನಿಲಯ ಘಟಿಕೋತ್ಸವ

ಜನವರಿ 28 (ಕರ್ನಾಟಕ ವಾರ್ತೆ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ 49 ನೇ ವಾರ್ಷಿಕ ಘಟಿಕೋತ್ಸವವು ಮಾರ್ಚ್ 14 ರ ಶನಿವಾರ ಬೆಳಿಗ್ಗೆ 11–00 ಗಂಟೆಗೆ ಬೆಂಗಳೂರು ಕೃಷಿ ಕಾಲೇಜಿನಲ್ಲಿ ನಡೆಯಲಿದೆ. ಪ್ರೊ. ಸಿ.ಎನ್.ಆರ್. ರಾವ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳೂ ಆದ ಶ್ರೀ ವಾಜುಭಾಯಿ ರೂಢಭಾಯಿ ವಾಲಾ ಅವರು ಘಟಿಕೋತ್ಸವದ ಅಧ್ಯಕ್ಷತೆ ವಹಿಸುವರು.

ಬಾಬು/ಕೆಎಂ

## ಉತ್ತಮ ಭಾಷೆ ಬಳಕೆಯಿಂದ ಸುದ್ದಿಗೆ ಜೀವ ತುಂಬಲು ಸಾಧ್ಯ

ಬೆಂಗಳೂರು ಜನವರಿ 28 (ಕರ್ನಾಟಕ ವಾರ್ತೆ)–

ಯಾವುದೇ ಸುದ್ದಿ ಮಾಡುವ ಸಂದರ್ಭದಲ್ಲಿ ಸೂಕ್ತ ಪದಗಳು ಹಾಗೂ ಉತ್ತಮ ಭಾಷೆ ಬಳಕೆಯಿಂದ ಸುದ್ಧಿಗೆ ಜೀವ ತುಂಬಲು ಸಾಧ್ಯ ಎಂದು ಪ್ರಜಾವಾಣಿ ಪತ್ರಿಕೆಯ ಕಾರ್ಯನಿರ್ವಾಹಕ ಸಂಪಾದಕರಾದ ಪದ್ಮರಾಜ್ ದಂಡಾವತೆ ತಿಳಿಸಿದರು.

ಅವರು ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಿದ್ದ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಮಾಧ್ಯಮಗಳಲ್ಲಿ ಭಾಷಾ ಬಳಕೆ ಕುರಿತು

ಮಾತನಾಡುತ್ತಿದ್ದರು. ಪತ್ರಿಕೆಗಳಲ್ಲಿ ಸುದ್ಧಿ ಮಾಡುವವರು ಪದಗಳ ಬಳಕೆಯಲ್ಲಿ ಎಚ್ಚರವಹಿಸಬೇಕು ಎಚ್ಚರ ವಹಿಸದಿದ್ದರೆ ಪತ್ರಿಕೆಗಳ ವರ್ಚಸ್ಸಿಗೆ ದಕ್ಕೆ ಬರಲಿದ್ದು, ಭಾಷೆಯನ್ನು ಬಳಸುವಾಗ ಜಾಗೃತಿವಹಿಸಬೇಕು ಎಂದು ಸಲಹೆ ನೀಡಿದರು.

ಪತ್ರಿಕೆಯ ಭಾಷೆ ಸುಲಲಿತವಾಗಿ ಹಾಗೂ ಸರಳವಾಗಿದ್ದು ಜನಸಾಮಾನ್ಯರಿಗೂ ಕೂಡ ಅರ್ಥವಾಗುವಂತೆ ಇರಬೇಕು, ಇಂದು ಪತ್ರಿಕೆಗಳು ತಮ್ಮದೆ ಆದ ಭಾಷೆಯನ್ನು ಬಳಸುತ್ತಿದ್ದಾರೆ ಎಂದು ತಿಳಿಸಿದರು.

ಪತ್ರಿಕೆಗಳಲ್ಲಿ ಭಾಷೆಯಿಂದ ಆಗುವ ತಪ್ಪುಗಳ ಮಾಹಿತಿ ನೀಡದ ಅವರು ಹಿಂದೆಯೂ ಸಹ ಪತ್ರಿಕೆಗಳಲ್ಲಿ ತಪ್ಪುಗಳು ಆಗುತ್ತಿದ್ದವು ಈಗಲೂ ಕೂಡ ತಪ್ಪುಗಳು ಆಗುತ್ತಿವೆ ಈ ತಪ್ಪುಗಳು ಆಗದಂತೆ ಎಚ್ಚರವಹಿಸಿ ಸುದ್ದಿ ಮಾಡಬೇಕು ಎಂದು ಹೇಳಿದರು.

ಇಂದಿನ ಪತ್ರಿಕೋದ್ಯಮದ ವಿದ್ಯಾರ್ಥಿಗಳು ಸಾಹಿತ್ಯದಲ್ಲಿ ಅಧ್ಯಯನ ನಡೆಸುವುದರಿಂದ ಪತ್ರಿಕೆಗಳಲ್ಲಿ ಉತ್ತಮ ಭಾಷೆ ಹಾಗೂ ವಾಕ್ಯ ರಚಿಸಲು ಅನುಕೂಲವಾಗತ್ತದೆ ಎಂದು ಸಲಹೆ ನೀಡಿದರು.

ಪ್ರಜಾವಾಣಿ ಪತ್ರಿಕೆಯ ಮುಖ್ಯ ಸಂಪಾದಕರಾದ ಎನ್.ಎಂ.ಇಸ್ಮಾಯಿಲ್ ಹೊಸ ಮಾಧ್ಯಮ ಸಾಮಾಜಿಕ ಮಾಧ್ಯಮ ಕುರಿತು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿರ್ದೇಶಕರಾದ ವಿಶುಕುಮಾರ್, ಜಂಟಿ ನಿರ್ದೇಶಕರಾದ ಎನ್.ಭೃಂಗೇಶ್ ಅವರು ಉಪಸ್ಥಿತರಿದ್ದರು.

**ಬಾಬು/ಎನ್‌ಎಸ್/ಕೆಎಂ**

## ಹೊಸ ಸಂಚಾರಿ ಪೊಲೀಸ್ ಠಾಣೆಗೆ ಸರ್ಕಾರದಿಂದ ಅನುಮೋದನೆ

ಬೆಂಗಳೂರು ಜನವರಿ 28 (ಕರ್ನಾಟಕ ವಾರ್ತೆ)–

ನಗರದಲ್ಲಿ ವಾಹನ ದಟ್ಟಣೆಯು ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಹೊಸ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯಲು ಮುಖ್ಯಮಂತ್ರಿಗಳು ಅನುಮೋದನೆ ನೀಡಿದ್ದಾರೆಂದು ಗೃಹ ಸಚಿವ ಕೆ.ಜೆ.ಜಾರ್ಜ್ ಅವರು ತಿಳಿಸಿದರು.

ಬೆಂಗಳೂರು ನಗರ ಸಂಚಾರಿ ಪೊಲೀಸ್ ಮತ್ತು ಸಾರಿಗೆ ಇಲಾಖೆಯು ಜಂಟಿಯಾಗಿ ಕಂಠೀರವ ಕ್ರೀಡಾಂಗಣದಲ್ಲಿ ಏರ್ಪಡಿಲಾಗಿದ್ದ 26 ನೇ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಬೆಂಗಳೂರು ನಗರವು ಸುಮಾರು 1.30 ಕೋಟಿ ಜನಸಂಖ್ಯೆ ಹೊಂದಿದ್ದು, ಈಗಾಗಲೇ 44 ಸಂಚಾರಿ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ. ಆದರೆ ಜನಸಂಖ್ಯೆ ಹಾಗೂ ವಾಹನ ದಟ್ಟಣೆಗೆ ಅನುಗುಣವಾಗಿ ಇನ್ನಷ್ಟು ಸಂಚಾರಿ ಪೊಲೀಸ್ ಠಾಣೆಗಳು ಅಗತ್ಯವಾಗಿರುವುದನ್ನು ಮನಗಂಡ ಸರ್ಕಾರವು ಸಧ್ಯದಲ್ಲೇ ಹೊಸ ಸಂಚಾರಿ ಪೊಲೀಸ್ ಠಾಣೆಗಳನ್ನು ತೆರೆಯಲಿದೆ ಎಂದರು.

ಈ ಸಪ್ತಾಹದ ಘೋಷಣಾ ವಾಕ್ಯವಾದ ಸುರಕ್ಷತೆ ಕೇವಲ ಘೋಷಣೆಯಲ್ಲ, ಅದು ಜೀವನ ಶೈಲಿ, ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತವು ಜನರಿಗೆ ಮಾರಕವಾಗಿ ಪರಿಣಮಿಸಿದೆ. ಆದ್ದರಿಂದ ಸಾರ್ವಜನಿಕರಿಗೆ ಅದರಲ್ಲೂ ವಿಶೇಷವಾಗಿ ಶಾಲಾ, ಕಾಲೇಜಿನ ವಿದ್ಯಾರ್ಥಿಗಳಿಗೆ ಸುರಕ್ಷತಾ ಕ್ರಮಗಳ ಕುರಿತು ಜಾಗೃತಿಯನ್ನು ಮೂಡಿಸಲು ಗೃಹ ಮತ್ತು ಸಾರಿಗೆ ಇಲಾಖೆಗಳಿಂದ ಕಾರ್ಯಗಾರವನ್ನು ಹಮ್ಮಿಕೊಳ್ಳಬೇಕಿದೆ ಎಂದು ಅಭಿಪ್ರಾಯಪಟ್ಟರು.

ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ ಬೆಂಗಳೂರು ನಗರ ಸಂಚಾರಿ ಪೊಲೀಸ್ ಅವರು ಹೊರ ತಂದಿರುವ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ

ಅವರು ರಸ್ತೆ ಸುರಕ್ಷತೆ ಕ್ರಮಗಳನ್ನು ಪಾಲಿಸದ ಕಾರಣ ಬೆಂಗಳೂರಿನಲ್ಲಿ 2014 ನೇ ಸಾಲಿನಲ್ಲಿ 5004 ಅಪಘಾತಗಳಾಗಿದ್ದು, 729 ಮಂದಿ ಮೃತಪಟ್ಟಿದ್ದಾರೆ. ಸರ್ಕಾರವು ರಸ್ತೆ ಸುರಕ್ಷತೆಗಾಗಿ ಅನೇಕ ಕಾನೂನುಗಳನ್ನು ಮಾಡಿದೆ. ಆದರೆ ವಾಹನ ಸವಾರರು ಕಾನೂನನ್ನು ಪಾಲಿಸವುದಿಲ್ಲ. ರಸ್ತೆ ಸುರಕ್ಷತೆಗಾಗಿ ಸಾರಿಗೆ ಇಲಾಖೆಯು ಗೃಹ ಇಲಾಖೆಗೆ ಎಲ್ಲಾ ವಿಷಯದಲ್ಲೂ ಸಹಕಾರವನ್ನು ನೀಡಲಿದೆ ಎಂದರು.

ಬೆಂಗಳೂರಿನಲ್ಲಿ ವಾಹನ ದಟ್ಟಣೆಯಿಂದ ಸಂಚಾರಿ ಸಮಸ್ಯೆಯಲ್ಲದೆ ಪರಿಸರ ಹಾಗೂ ಶಬ್ಧ ಮಾಲಿನ್ಯವು ಹೆಚ್ಚಾಗುತ್ತಿರುವುದನ್ನು ತಡೆಗಟ್ಟಲು ಸ್ವಯಂ ಸಂಘದ ಜೊತೆ ಸಾರ್ವಜನಿಕರೂ ತಮ್ಮ ವಾಹನಗಳನ್ನು ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಪರಿಸರ ನೈರ್ಮಲ್ಯ ತಡೆಗೆ ಸಹಕರಿಸಬೇಕೆಂದರು.

ಮೂಲಸೌಲಭ್ಯ ಅಭಿವೃದ್ಧಿ, ವಾರ್ತಾ ಹಾಗೂ ಹಜ್ ಸಚಿವ ಆರ್ ರೋಷನ್ ಬೇಗ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಮಹಾ ನಿರ್ದೇಶಕರು ಮತ್ತು ಪೊಲೀಸ್ ಮಹಾ ನಿರೀಕ್ಷಕ ಲಾಲ್ ರೊಖುಮಾ ಪಚಾವೋ, ಸಾರಿಗೆ ಇಲಾಖೆ ಆಯುಕ್ತ ಡಾ; ರಾಮೇಗೌಡ, ಬೆಂಗಳೂರು ನಗರ ಪೊಲೀಸ್ ಆಯುಕ್ತ ಎಂ.ಎನ್. ರೆಡ್ಡಿ ಸೇರಿದಂತೆ ಹಲವು ಗಣ್ಯರು ಹಾಗೂ ಹಿರಿಯ ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ವಿಧ್ಯಾರ್ಥಿಗಳು, ರಸ್ತೆ ಸುರಕ್ಷತಾ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಬೆಂಗಳೂರಿನ ಪ್ರತಿಷ್ಠಿತ 45 ಶಾಲೆಗಳ ಮಕ್ಕಳಿಂದ ಪಥ ಸಂಚಲನ ಕಾರ್ಯಕ್ರಮವು ನಡೆಯಿತು.

**ಬಾಬು/ಬಿಜಿಪಿ/ಕೆಎಂ**

ಛಾಯಾಚಿತ್ರ ಶೀರ್ಷಿಕೆ:

ಹಿರಿಯ ಪತ್ರಕರ್ತ ಶ್ರೀ ಪದ್ಮರಾಜ್ ದಂಡಾವತೆ ಅವರು ಇಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಏರ್ಪಡಿಸಿದ್ದ ವೃತ್ತಿ ಹಾಗೂ ನಿರೂಪಣಾ ಕೌಶಲ್ಯ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸಿ ಮಾಧ್ಯಮಗಳಲ್ಲಿ ಭಾಷಾ ಬಳಕೆ ಕುರಿತು ಮಾತನಾಡಿದರು. ಜಂಟಿ ನಿರ್ದೇಶಕ ಶ್ರೀ ಎನ್. ಭೃಂಗೀಶ್ ಅವರು ಚಿತ್ರದಲ್ಲಿದ್ದಾರೆ.